ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ
ದಿನಾಂಕ : DATE : 30-8-20

## ನ್ಯಾ. ಸದಾಶಿವ ವರದಿ ಜಾರಿಗೆ ಒತ್ತಡ | ಕೋರ್ಟ್ ತೀರ್ಪಿನ ನಂತರ ಜಾತಿಗಣತಿ ವರದಿ

# ಸರ್ಕಾರಕ್ಕೆ ಒಳಮೀಸಲಾತಿ ಬಿಸಿತುಪ್ಪ

■ ವಿಜಯವಾಣಿ ಸುದ್ದಿಜಾಲ, ಬೆಂಗಳೂರು

ಪ್ರಕರಣವೊಂದರ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ವ್ಯಕ್ತಪಡಿಸಿರುವ ಮೀಸಲಾತಿ ಮರು ವರ್ಗೀಕರಣ ಕುರಿತ ಅಭಿಪ್ರಾಯ ರಾಜ್ಯದಲ್ಲಿ ಮತ್ತೊಮ್ಮೆ ಚರ್ಚೆಗೆ ಬಂದಿರುವುದು ಸರ್ಕಾರದ ಪಾಲಿಗೆ ಬಿಸಿತುಪ್ಪವಾಗಿ ಮಾರ್ಪಟ್ಟಿದೆ.

ಪರಿಶಿಷ್ಟ ಜಾತಿಯಲ್ಲಿ ಮೀಸಲಾತಿ ಮರು ವರ್ಗೀಕರಣಕ್ಕೆ ನ್ಯಾ. ಎ.ಜೆ. ಸದಾಶಿವ ಅವರ ವರದಿ, ಪರಿಶಿಷ್ಟರ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದಂತೆ ನ್ಯಾ. ನಾಗಮೋಹನದಾಸ್ ವರದಿ ಹಾಗೂ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಸಲ್ಲಿಸಲು ಸಿದ್ಧವಾಗಿರುವ ಹಿಂದುಳಿದ ವರ್ಗಗಳ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಅಧ್ಯಯನ ವರದಿಗಳ ಬಗ್ಗೆ ಚರ್ಚೆ ಆರಂಭವಾಗಿದೆ.

ರಾಜ್ಯದಲ್ಲಿ ಮೀಸಲಾತಿ ವರ್ಗೀಕರಣ ಮೊದಲಿನಿಂದಲೂ ಇದ್ದೇ ಇದೆ. ಅದು ಈಗ ಪರಿಷ್ಕರಣೆಯಾಗಬೇಕಾಗಿದೆ. ರಾಷ್ಟ್ರಮಟ್ಟದ ಮೀಸಲಾತಿ ಪಟ್ಟಿಯಲ್ಲಿ ಮರು ವರ್ಗೀಕರಣಕ್ಕೆ ಸಂಬಂಧಿಸಿದಂತೆ ನ್ಯಾ. ರೋಹಿಣಿ ಸಮಿತಿ ರಚನೆಯಾಗಿದ್ದು, ಇನ್ನಷ್ಟೇ ವರದಿ ಸಲ್ಲಿಸಬೇಕಾಗಿದೆ.

**ಸರ್ಕಾರ ಕೂಡಲೇ ಸಂಪುಟದಲ್ಲಿ ಚರ್ಚೆ ನಡೆಸಿ ಒಳ ಮೀಸಲಾತಿ ಜಾರಿಗಾಗಿ ಕೇಂದ್ರಕ್ಕೆ ಶಿಫಾರಸು ಮಾಡಲಿ.**

**| ಎಸ್. ಆಂಜನೇಯ** ಮಾಜಿ ಸಚಿವ

**ಇಕ್ಕಟ್ಟಿನ ಪರಿಸ್ಥಿತಿ:** ಪರಿಶಿಷ್ಟ ಜಾತಿಯಲ್ಲಿ ಎಡಗೈ, ಬಲಗೈ ಹಾಗೂ ಸ್ಪೃಶ್ಯ ಸಮುದಾಯಗಳ ನಡುವೆ ಮೀಸಲಾತಿ ಹಂಚಿಕೆಯ ಗೊಂದಲ ಸಾಕಷ್ಟು ವರ್ಷಗಳಿಂದ ನಡೆಯುತ್ತ ಬಂದಿದೆ. ಎಡಗೈ ಸಮುದಾಯ ತನ್ನ ಪಾಲಿಗೆ ಮೊದಲಿನಿಂದಲೂ ಅನ್ಯಾಯವಾಗಿದೆ ಎಂದೇ ವಾದಿಸುತ್ತ ಬಂದಿದೆ. ಸಾಕಷ್ಟು ಹೋರಾಟ ನಡೆದಿವೆ. ಅದರ ಪರಿಣಾಮವಾಗಿಯೇ ಹಿಂದೆ ಸರ್ಕಾರ ರಚನೆ ಮಾಡಿದ್ದ ನ್ಯಾ. ಎ.ಜೆ. ಸದಾಶಿವ ಆಯೋಗ ಸರ್ಕಾರಕ್ಕೆ ತನ್ನ ಶಿಫಾರಸು ಸಲ್ಲಿಸಿದೆ. ಜಾರಿಯಲ್ಲಿರುವ ಮೀಸಲಾತಿ ಪ್ರಮಾಣವನ್ನು ಹಂಚಿಕೆ ಮಾಡಿದೆ. ಆ ವರದಿಯನ್ನು ಸರ್ಕಾರ ಇದೀಗ ಅಂಗೀಕಾರ ಮಾಡಬೇಕಾಗಿದೆ. ಎಡಗೈ ಸಮುದಾಯದ ಒತ್ತಡ ಇದ್ದರೂ ಸಹ ವಿರೋಧವೂ ಅಷ್ಟೇ ಇರುವುದರಿಂದ ಸರ್ಕಾರಕ್ಕೆ ಇಕ್ಕಟ್ಟಿನ ಸನ್ನಿವೇಶ ಎದುರಾಗಿದೆ.



### ಕೋರ್ಟ್ ಮುಂದೆ ಕೇಸ್

ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಜಾತಿಗಣತಿ ಮಾಡಿರುವ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಬೇಕಾಗಿದೆ. ಗಣತಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ನ್ಯಾಯಾಲಯದಲ್ಲಿ ನಡೆದಿದೆ. ಕೋರ್ಟ್‌ನಲ್ಲಿ ಇತ್ಯರ್ಥವಾಗದ ಹೊರತು ವರದಿಯ ಸ್ವೀಕಾರಕ್ಕೆ ಸರ್ಕಾರ ಸಿದ್ಧವಿಲ್ಲ. ಹಿಂದುಳಿದ ವರ್ಗಗಳ ಆಯೋಗದ ವರದಿ ಸಹ ಸರ್ಕಾರಕ್ಕೆ ಸಲ್ಲಿಕೆ ಕಷ್ಟ.

### ಸುಪ್ರೀಂ ಏನು ಹೇಳಿದೆ?

2005ರಲ್ಲಿ 'ಚಿನ್ನಯ್ಯ ವರ್ಸಸ್ ಆಂಧ್ರಪ್ರದೇಶ ಸರ್ಕಾರ' ಪ್ರಕರಣದಲ್ಲಿ ಒಳ ಮೀಸಲಾತಿ ಕೊಡುವುದಕ್ಕೆ ರಾಜ್ಯಗಳಿಗೆ ಅಧಿಕಾರ ಇಲ್ಲವೆಂದು ನ್ಯಾಯಾಲಯ ಹೇಳಿತ್ತು. ಇದೀಗ ಐದು ಜನರ ಪೀಠ ರಾಜ್ಯಗಳಿಗೆ ಅಧಿಕಾರವಿದೆ, ಆದರೆ 7 ರಿಂದ 9 ಜನರ ನ್ಯಾಯಾಧೀಶರ ಪೀಠದಲ್ಲಿ ಅಂತಿಮ ತೀರ್ಮಾನವಾಗಬೇಕು ಎಂದು ಹೇಳಿದೆ.

**ಕಾಲಕಾಲಕ್ಕೆ ಮೀಸಲಾತಿ ಮರು ವರ್ಗೀಕರಣ ಪರಿಣಾಮಕಾರಿಯಾಗಿ ಜಾರಿಯಾಗಬೇಕು.**

**| ಎಚ್. ಕಾಂತರಾಜ್** ವಕೀಲರು

| | |
|---|---|
| ಎಡಗೈ ಸಮುದಾಯ | ಶೇ. 6 |
| ಬಲಗೈ ಸಮುದಾಯ | ಶೇ.5 |
| ಸ್ಪೃಶ್ಯ ಸಮುದಾಯಗಳಿಗೆ | ಶೇ.3 |
| ಇತರ ಸಮುದಾಯಗಳಿಗೆ | ಶೇ. 1 |

| | |
|---|---|
| ಪ.ಜಾತಿಗೆ | ಶೇ. 15 ರಿಂದ ಶೇ.17 ಏರಿಕೆ |
| ಪ.ಪಂಗಡಕ್ಕೆ | ಶೇ. 3 ರಿಂದ ಶೇ. 7 ಏರಿಕೆ |

| | |
|---|---|
| ಪ್ರವರ್ಗ 1 | ಶೇ.4 |
| 2ಎ | ಶೇ. 15 |
| 2ಬಿ | ಶೇ. 4 |
| 3ಎ | ಶೇ.4 |
| 3ಬಿ | ಶೇ.5 |
| ಪರಿಶಿಷ್ಟ ಜಾತಿ | ಶೇ.15 |
| ಪರಿಶಿಷ್ಟ ಪಂಗಡ | ಶೇ.3 |

### ವರದಿಯ ಬಗ್ಗೆ ಆಕ್ಷೇಪ

ನ್ಯಾ. ಸದಾಶಿವ ಆಯೋಗದ ವರದಿ ಬಗ್ಗೆ ಕೆಲ ಸಮು ದಾಯಗಳಲ್ಲಿ ಆಕ್ಷೇಪ ಇದೆ. ಕೇಂದ್ರ ಸರ್ಕಾರದ ಜಾತಿಗಣತಿಯ ಅಂಕಿಅಂಶ ಹಾಗೂ ಸದಾಶಿವ ವರದಿಯ ಅಂಕಿಅಂಶಗಳಿಗೆ ಸಾಕಷ್ಟು ವ್ಯತ್ಯಾಸಗಳಿವೆ ಎಂಬ ಆರೋಪಗಳನ್ನು ಮಾಡುತ್ತಿವೆ. ಇನ್ನೊಂದು ಜನಗಣತಿ ನಂತರವೇ ಅಂತಿಮ ತೀರ್ಮಾನವಾಗಬೇಕು ಎಂಬ ಒತ್ತಾಯವೂ ಕೇಳಿ ಬರುತ್ತಿದೆ.

### ಪರಿಶಿಷ್ಟ ವರ್ಗದ ಹೋರಾಟ

ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಪರಿಶಿಷ್ಟ ವರ್ಗದವರು ಸಾಕಷ್ಟು ಹೋರಾಟ ಮಾಡಿದ್ದರು. ಆ ಸಂದರ್ಭದಲ್ಲಿ ಸರ್ಕಾರ ನ್ಯಾ. ನಾಗಮೋಹನದಾಸ್ ಆಯೋಗ ರಚಿಸಿಸಲಾಗಿತ್ತು. ಸಮಿತಿ ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಶೇ.15 ರಿಂದ 17ಕ್ಕೆ ಹಾಗೂ ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಶೇ. 3 ರಿಂದ 7ಕ್ಕೆ ಹೆಚ್ಚಿಸುವಂತೆ ಶಿಫಾರಸು ಮಾಡಿದೆ ಎನ್ನಲಾಗಿದೆ.

**ಸರ್ಕಾರ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ. ಒಳಮೀಸಲಾತಿ ಕುರಿತಂತೆ ಸುಪ್ರೀಂಕೋರ್ಟ್‌ನ 7 ಅಥವಾ 9 ಜಡ್ಜ್‌ಗಳ ಪೀಠ ಅಂತಿಮ ತೀರ್ಪು ನೀಡಬೇಕಾಗುತ್ತದೆ. ರಾಜ್ಯಗಳಿಗೆ ಒಳ ಮೀಸ ಲಾತಿ ನೀಡುವ ಅಧಿಕಾರ ಇದೆ ಎಂದು ಸುಪ್ರೀಂಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ಸಂಪುಟದಲ್ಲಿ ಚರ್ಚೆ ಮಾಡುತ್ತೇವೆ.**

**| ಗೋವಿಂದ ಕಾರಜೋಳ** ಉಪ ಮುಖ್ಯಮಂತ್ರಿ